ಶ್ರೀ ಜಿ. ಬಸವಣ್ಣೆಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಹೌದು.

ಅಕ್ಕಿ ನೀಡುವ ಪ್ರಮಾಣ ಕಡಿಮೆ ಆಗಿದೆ. ಸಕ್ಕರೆ ನೀಡವ ಪ್ರಮಾಣದಲ್ಲಿ ಕಡಿಮೆಯಾಗಿಲ್ಲ.

ಆ) ದಿನಾಂಕ1-6-97ರಿಂದ ಕೇಂದ್ರ ಸರ್ಕಾರವು ರೂಪಿಸಿರುವ ನಿರ್ದಿಷ್ಟ ಗುರಿಯುಳ್ಳ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಕರ್ನಾಟಕ ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಭಾರತ ಸರ್ಕಾರವು ತಾವು ನೀಡುತ್ತಿದ್ದ ಅಕ್ಕಿ ಮತ್ತು ಗೋಧಿ ಪ್ರಮಾಣವನ್ನು ಸುಮಾರು ಶೇ. 50 ರಷ್ಟು ಕಡಿಮೆ ಮಾಡಿರುವುದರಿಂದ ಕೇಸರಿ ಗೋಟೋ ಕಾರ್ಡುಗಳನ್ನು ಹೊಂದಿರುವವರಿಗೆ ಪ್ರತೀ ಕಾರ್ಡುದಾರರಿಗೆ 2 1/2 ಕೆ.ಜಿ. ಅಕ್ಕಿಯನ್ನು ವಿತರಿಸಲಾಗುವುದು. ಬೆಳಗಾಂ, ಬಿಜಾಪುರ, ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಪ್ರತಿ ಕಾರ್ಡಿಗೆ 2 1/2 ಕೆ.ಜಿ. ಯಂತೆ ಗೋಧಿಯನ್ನು ವಿತರಿಸಲಾಗುವುದು.

ಇ) ದಿನಾಂಕ 1-6-97ರಿಂದ ಕೇಂದ್ರ ಸರ್ಕಾರವು ರಾಜ್ಯಕ್ಕೆ 75,000 ಮೆ.ಟನ್ ಆಹಾರ ಧಾನ್ಯವನ್ನು ಹಂಚಿಕೆ ಮಾಡುತ್ತಿದ್ದು ಈ ಪ್ರಮಾಣವು ಸಾಲದೇ ಇರುವುದರಿಂದ ತಿಂಗಳ ಕೋಟಾವನ್ನು 1.20 ಲಕ್ಷ ಮೆ. ಟನ್‌ಗೆ ಏರಿಸಬೇಕೆಂದು ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ದಿನಾಂಕ 9-7-97 ರಂದು ಪತ್ರ ಬರೆದಿರುತ್ತಾರೆ.

ವಿಷಯ : ತುಂಗಭದ್ರಾ ಜಲಾಶಯದಿಂದ ಹೂಳು ತೆಗೆಯುವ ಕಾರ್ಯಕ್ರಮ

1483 (2107) ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಭಾರೀ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ತುಂಗಭದ್ರಾ ಜಲಾಶಯದಿಂದ ಹೂಳು ತೆಗೆಯುವ ಕೆಲಸವನ್ನು ಕೈಗೊಳ್ಳಾಲಾಗಿದೆಯೇ

2. ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು

3. ಈ ಜಲಾಶಯದಲ್ಲಿ ಇರತಕ್ಕ ಹೊಳಿನ ಅಂದಾಜು ಪ್ರಮಾಣವೆಷ್ಟು?

4. ಇದರಿಂದ ಎಷ್ಟು ನೀರು ಶೇಖರಿಸಲು ಸಾಧ್ಯವಾಗುತ್ತಿಲ್ಲ.

5. ಇದಕ್ಕಾಗಿ 1997-98ರಲ್ಲಿಸರ್ಕಾರವು ವೆಚ್ಚಮಾಡುವ ಹಣವೆಷ್ಟು?

ಶ್ರೀ ಕೆ. ಎನ್. ನಾಗೇಗೌಡ (ಬಾರಿ ನೀರಾವರಿ ಸಚಿವರು)

1) ಇಲ್ಲ.

2) ಇದು ಆರ್ಥಿಕವಾಗಿ ಸಾದುವಲ್ಲವೆನ್ನುವ ಕಾರಣದಿಂದ.

3) 1993ರ ಸೆಮೆಂಟೇಷನ್ ಸರ್ವೇ ಪ್ರಕಾರ ಹೂಳು ತುಂಬಿರುವ ಪ್ರಮಾಣ 20,97 ಟಿ.ಎಂ.ಸಿ.

4) ಮತ್ತು 5) ಮೇಲಿನ ಉತ್ತರಗಳಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ಮಲೆನಾಡು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರ ವಿವೇಚನಾ ನಿಧಿಯಿಂದ ಖರ್ಚು ಮಾಡಿದ ಹಣ

1484 (2092) ಶ್ರೀ ಹೆಚ್. ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಕಾಡಾ ಮತ್ತು ಪ್ರದೇಶಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮಲೇನಾಡು ಅಭಿವೃದ್ಧಿ ಮಂಡಳಿ ವತಿಯಿಂದ 1994-95, 1995-96, 1996-97ನೇ ಸಾಲಿನಲ್ಲಿ ಅಧ್ಯಕ್ಷರ ವಿವೇಚನಾ ನಿಧಿಯಿಂದ ಮಾಡಿದ ವೆಚ್ಚದಷ್ಟು ಹಾಗೂ ಯಾವ ಯಾವ ಕಾಮಗಾರಿಗಾಗಿ ವೆಚ್ಚ ಮಾಡಲಾಗಿದೆ. (ವಿವರ ನೀಡುವುದು)

ಆ) ವಿಶೇಷ ಘಟಕ ಯೋಜನೆಯಡಿ ಕೈಗೊಳ್ಳಬೇಕಾದ ಕಾಮಗಾರಿಗಳಿಗೆ 1997-98ರ ಸಾಲಿನಲ್ಲಿ ಎಂ.ಎ.ಡಿ. ಬಿ.ಯಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ಕೆ. ವೆಂಕಟೇಶ್ (ಕಾಡಾ ಮತ್ತು ಪ್ರದೇಶಾಭಿವೃದ್ಧಿ ರಾಜ್ಯ ಮಂತ್ರಿಗಳು)

ಅ) ಅಧ್ಯಕ್ಷರ ವಿವೇಚನಾ ನಿಧಿಯಿಂದ ವೆಚ್ಚ ಮಾಡಿದ ವಿವರಗಳು ಈ ಕೆಳಕಂಡಂತಿದೆ.

ವರ್ಷ	**ಖರ್ಚು ಮಾಡಿರುವ ಹಣ (ಲಕ್ಷ ರೂ.ಗಳಲ್ಲಿ)**
1994-95	149.61
1995-96	86.85
1996-97	67.82

ಈ ಹಣವನ್ನು ರಸ್ತೆ ಮತ್ತು ಸೇತುವೆ, ಯುವಕ ಮಂಡಳಿ, ಸಮುದಾಯ ಭವನ, ನೀರು ಸರಬರಾಜು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ಖರ್ಚು ಮಾಡಲಾಗಿದೆ.